ಕರ್ನಾಟಕ ವಿಧಾನ ಸಭೆ

ಶುಕ್ರವಾರ, 17ನೇ ಫೆಬ್ರವರಿ ತಿಂಗಳು 1984

ವಿಧಾನ ಸೌಧದ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಮಧ್ಯಾಹ್ನ 1 ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಅವರು ಪೀಠವನ್ನು ಅಲಂಕರಿಸಿದರು.

1. ಸಂತಾಪ ಸೂಚಕ ನಿರ್ಣಯ

ವಿಷಯ : ರಷ್ಯದ ಅಧ್ಯಕ್ಷ ಯೂರಿ ಆಂದ್ರೋಪೋವ್ ನಿಧನದ ಬಗ್ಗೆ

ಅಧ್ಯಕ್ಷರು.— ರಷ್ಯಾದ ಅಧ್ಯಕ್ಷ ಶ್ರೀ ಯೂರಿ ಆಂದ್ರೋಪೋವ್ ಅವರು ದಿನಾಂಕ 9-2-84 ರಂದು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

1915ರ ಜೂನ್ 15 ರಂದು ರೈಲ್ವೆ ಕಾರ್ಮಿಕರೊಬ್ಬರ ಕುಟುಂಬದಲ್ಲಿ ಜನಿಸಿದ ಆಂದ್ರೋಪೋವ್ ಅವರು ಓರ್ವ ಯುವ ನಾಯಕರಾಗಿ ರಾಜಕೀಯ ಜೀವನ ಆರಂಭಿಸಿ, ತಮ್ಮ 67ನೇ ವಯಸ್ಸಿನಲ್ಲಿ ಲಿಯೋನಿಡ್ ಬ್ರಿಜ್ನೇವ್ ನಿಧನರಾದ ಬಳಿಕ 1982ರ ನವೆಂಬರ್ 12 ರಂದು ರಷ್ಯಾದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಶ್ರೀಯುತರು ವಿಶ್ವಶಾಂತಿ ಹಾಗೂ ಭಾರತ ರಷ್ಯ ನಡುವಣ ಮೈತ್ರಿ ವರ್ಧನೆಗೆ ಶ್ರಮಿಸಿದ್ದರು ಹಾಗೂ ಇಂದಿನ ಅಣ್ವಸ್ತ್ರ ಪೈಪೋಟಿಯ ಅಪಾಯ ಕುರಿತು ವಿಶ್ವದ ಜನರಲ್ಲಿ ಮೂಡಿಸಿದ ಪ್ರಜ್ಞೆ ಇವು ಇವರ ಮುಖ್ಯ ಸಾಧನೆಗಳು.

ನಿಧನ ಹೊಂದಿದ ಯೂರಿ ಆಂದ್ರೋಪೋವ್ ಅವರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಒಂದು ನಿಮಿಷ ಎದ್ದು ನಿಂತು ಮೌನ ಆಚರಿಸಿತು)

2. ಮನವಿಗಳು

ವಿಷಯ : ಕ್ರಾಂತಿ ಪತ್ರಿಕೆಯ ಸಂಪಾದಕರ ಕೊಲೆ ಬಗ್ಗೆ.

ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೇ, ಕಲ್ಬುರ್ಗಿ ಜಿಲ್ಲೆಯ ಕ್ರಾಂತಿ ಪತ್ರಿಕೆಯ ಸಂಪಾದಕರಾದ ಸಿದ್ಧರಾಮೇಶ್ವರವರ ಕೊಲೆಯ ಪ್ರಕರಣವನ್ನು ಇಂದಿನ ಎಲ್ಲಾ ಕಾರ್ಯ ಕಲಾಪಗಳನ್ನು ಮುಂದಕ್ಕೆ ಹಾಕಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಕರ್ನಾಟಕದಲ್ಲಿ ಪ್ರಥಮವಾಗಿ ಒಬ್ಬ ಪತ್ರಿಕಾ ಸಂಪಾದಕನ ಕೊಲೆಯಾಗಿದೆ. ಈ ವಿಚಾರದಲ್ಲಿ ಕರ್ನಾಟಕದ ಜನತೆ ಕಳವಳಕ್ಕೆ ಗುರಿಯಾಗಿದೆ ; 9-30ಕ್ಕೆ ಅವರು ಕಾರಿನಲ್ಲಿ ಬರುವಾಗ ಕೊಲೆಯಾಗಿದೆ. ಪತ್ರಿಕಾ ಸಂಘದವರು ಇದರ ಬಗ್ಗೆ ಪ್ರತಿಭಟನೆ ಮಾಡಿದ್ದಾರೆ. ಯಾವ ರೀತಿಯಲ್ಲಿ ಕೊಲೆಯಾಗಿದೆ ? ಇದರ ಹಿನ್ನೆಲೆ ಏನು ? ಎಲ್ಲ ವಿಷಯಗಳು ಸದನಕ್ಕೆ ಗೊತ್ತಾಗಬೇಕಾಗಿದೆ. ಇದು ಮಹತ್ವವಾದ ವಿಷಯವಾಗಿರುವುದರಿಂದ ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.— ಮಾನ್ಯ ಅಧ್ಯಕ್ಷರೇ, ಪತ್ರಿಕಾ ಪ್ರಪಂಚಕ್ಕೆ ಇದರಿಂದ ತುಂಬಲಾರದ ಹಾನಿಯಾಗಿದೆ. ಇವತ್ತು ಗುಲ್ಬರ್ಗ ಟೌನ್‌ನಲ್ಲಿ ಜನತೆಯಲ್ಲಿ ಅಲ್ಲೋಲ ಕಲ್ಲೋಲ ಉಂಟಾಗಿದೆ

(ಗೊಂದಲ)

ಅಧ್ಯಕ್ಷರು.— ಆರ್ಡರ್ ಪ್ಲೀಸ್.

ಶ್ರೀ ಗೋವಿಂದ ಪಿ. ಒಡೆಯರಾಜ್.— ಕರ್ನಾಟಕ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಯಾವ ಮಟ್ಟಕ್ಕೆ ಮುಟ್ಟಿದೆ ಎಂಬುದು ಇದರಿಂದ ಗೊತ್ತಾಗುತ್ತದೆ.

ಶ್ರೀ ಹೆಚ್. ಗಂಗಾಧರ್.— ಬದುಕಿರುವವರ ಬಗ್ಗೆ ಮೊದಲು ಏನು ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂಬುದರ ಬಗ್ಗೆ ಚಿಂತನೆ ಮಾಡೋಣ ; ನಂತರ ಸತ್ತವರ ಬಗ್ಗೆ ಯೋಚನೆ ಮಾಡೋಣ.

ಅಧ್ಯಕ್ಷರು.— ಆರ್ಡರ್ ಪ್ಲೀಸ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹೀಗೆ ಬೇಜವಾಬ್ದಾರಿಯಿಂದ ಮಾತನಾಡುವುದು ಸರಿಯಲ್ಲ. ಬಜೆಟ್‌ಗೆ ಇನ್ನೂ 15 ದಿವಸ ಟೈಂ ಇದೆ. ಇದು ಬಹಳ ಮಹತ್ವದ ಪ್ರಶ್ನೆಯಾಗಿದೆ.

ಅಧ್ಯಕ್ಷರು.— ರಾಜ್ಯದ ಆಯವ್ಯಯಕ್ಕಿಂತ ದೊಡ್ಡ ಪ್ರಶ್ನೆ ಯಾವುದೂ ಇಲ್ಲ. ಈಗ ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯವನ್ನು ಮಂಡನೆ ಮಾಡಬಹುದು.

ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ವಿಷಯ.

ಅಧ್ಯಕ್ಷರು.— ಸೋಮವಾರ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುತ್ತೇನೆ.